## 7

ನಾನು ಮತ್ತು ಬಿಲ್ ಹುಡುಗನ ತಂದೆ ಡೊರ್ಸೆಟನಿಗೆ ಒತ್ತೆ ಹಣದ ಬಗ್ಗೆ ಪತ್ರ ಬರೆಯುವ ಕಾಯಕದಲ್ಲಿ ತಲ್ಲೀನರಾಗಿದ್ದೆವು. ರೆಡ್ ಇಂಡಿಯನ್ ಯಜಮಾನ ಮೈಮೇಲೆ ಕಂಬಳಿಯೊಂದನ್ನು ಹೊದ್ದುಕೊಂಡು, ಕೈಯಲ್ಲಿ ರೈಫಲನ್ನು ಹಿಡಿದುಕೊಂಡು ಗುಹೆಯ ಬಾಗಿಲನ್ನು ಕಾಯುತ್ತಿದ್ದ. ಒತ್ತೆ ಹಣವನ್ನು ಎರಡು ಸಾವಿರ ಡಾಲರುಗಳಿಂದ ಒಂದೂವರೆ ಸಾವಿರ ಡಾಲರುಗಳಿಗೆ ಇಳಿಸಲು ಬಿಲ್ ಒತ್ತಾಯ ಮಾಡತೊಡಗಿದ. 'ತಂದೆ ತಾಯಂದಿರಿಗೆ ಮಕ್ಕಳ ಮೇಲಿನ ಮಮತೆಯ ಬಗ್ಗೆ ನನಗೆ ಎಳ್ಳಷ್ಟೂ ಸಂಶಯವಿಲ್ಲ ಸ್ಯಾಮ್. ಆದರೂ, ಮನುಷ್ಯರು ಮನುಷ್ಯರೇ. ಎರಡು ಕಾಲಿನ ಈ ಪುಂಡ ಕಾಡು ಬೆಕ್ಕಿಗೆ ಅವನ ಅಪ್ಪ ಎರಡು ಸಾವಿರ ಡಾಲರು ಪೀಕುತ್ತಾನೆಯೇ ಎಂಬುದು ನನ್ನ ಪ್ರಶ್ನೆ. ನಿನಗೆ ಕಡಿಮೆಯಾಯ್ತು ಎಂದು ಎನಿಸಿದರೆ ನನ್ನ ಪಾಲಿನಿಂದಲೇ ಎತ್ತಿಕೊಂಡು ಬಿಡು!' ಎಂದ.

ಅವನ ಮಾತಿಗೆ ನಾನು ಬೆಲೆ ಕೊಡಲೇ ಬೇಕಾಯಿತು. ಕೊನೆಗೆ ಪತ್ರವನ್ನು ಹೀಗೆ ಬರೆದೆವು:

